ಮರೆತು, ಅದರಲ್ಲೂ ನಗರೀಕರಣದ ಆಸೆಯಲ್ಲಿ ಇದನ್ನು ಸಂಪೂರ್ಣ ಮರೆತು, ಎಲ್ಲವನ್ನೂ ಕಂಗೆಡಿಸಿ, ಹವಾಮಾನ ಬದಲಾವಣೆ ಎಂದು ನಿಸರ್ಗಕ್ಕೇ ಆರೋಪಿಸಿ ತಾನು ಕೈತೊಳೆದುಕೊಳ್ಳುವ ಜಾಯಮಾನ ಇರಿಸಿಕೊಂಡಿದ್ದಾನೆ. ಇದಕ್ಕೆಲ್ಲಾ ತಾನೇ ಕಾರಣ ಎನ್ನುವುದನ್ನೂ ಒಪ್ಪಿಕೊಳ್ಳದ ರಾಜಕೀಯವೇ ಅಧಿಕಾರದಲ್ಲಿರುವುದು. ಮಣ್ಣಿನ ಹುಟ್ಟನ್ನು ಅರ್ಥೈಸುವಲ್ಲಿಯೇ ಹವಾಮಾನ ತನ್ನಿಚ್ಛೆಯಂತೆ ಬರೆಯಬಲ್ಲುದು ಎಂಬ ಸೂಕ್ಷ್ಮವನ್ನು ಮಣ್ಣು ವಿಜ್ಞಾನಿ ಡ್ಯುಕೊಚೇವ್ ಹೇಳಿದ್ದರೂ, ಮುಂದೆ ಬಂದ ಅನೇಕರು ಪ್ರತಿಪಾದಿಸುತ್ತಲೇ ಇದ್ದರೂ ಎಲ್ಲಾ ಮರೆತ ಸಂಸ್ಕೃತಿ ನಮ್ಮದಾಗಿದೆ.

ನಗರೀಕರಣದ ಪ್ರಭಾವದಿಂದ ಮಣ್ಣಿನಲ್ಲಿ ಫಲವತ್ತತೆಯನ್ನು ಕಳೆದುಕೊಳ್ಳುವ ಗ್ರಾಮಗಳು, ಆಹಾರದ ತ್ಯಾಜ್ಯದಿಂದ ಕೊಳೆಸಿಕೊಳ್ಳುವ ನಗರಗಳು ಸೃಷ್ಟಿಯಾಗುತ್ತಿವೆ/ಸೃಷ್ಟಿಯಾಗಿವೆ. ಹಲವಾರು ಕಾರಣಗಳಿಂದ ಅನೇಕರು ಕೃಷಿಯಿಂದ ವಿಮುಖಿಗೊಂಡು ನಗರಗಳತ್ತ ಹೊರಟರು. ಇದೀಗ ನಮ್ಮ ರಾಜ್ಯದಲ್ಲಿಯೇ ಪ್ರತಿಶತ 40–45ರಷ್ಟು, ಅಂದರೆ ಸುಮಾರು 2.5 ಕೋಟಿಗಳಷ್ಟು ಜನರು ನಗರವಾಸಿಗಳಾಗಿದ್ದಾರೆ. ಪರಿಸ್ಥಿತಿ ಇನ್ನೂ ಹೆಚ್ಚುತ್ತಲೇ ಇದೆ. ಇವರುಗಳಿಗೆ ಸರಬರಾಜಾದ ಆಹಾರ ನಗರಗಳಲ್ಲೇ ಕೊಳೆಯುತ್ತಾ ಗೊಬ್ಬರವಾಗಿ ವಾಪಸ್ಸು ಹಳ್ಳಿಗಳ ಜಮೀನಿಗೆ ತಲುಪುತ್ತಿಲ್ಲ. ಹಳ್ಳಿಯ ತೋಟಗಳ ಹೂ–ಹಣ್ಣುಗಳು ತಾಜಾ ಆಗಿ ಬಂದು ನಗರದ ಮಾರುಕಟ್ಟೆಯಲ್ಲಿ ಕಳೆಕಟ್ಟಿ, ಮಾರಾಟಗೊಂಡು, ಊರಲ್ಲೇ ಉಳಿದು, ಕೊಳೆತು ನಾರುತ್ತವೆ. ಜೊತೆಗೆ ಉಳಿದ ಆಹಾರ ಪದಾರ್ಥವೂ ನಗರಗಳನ್ನು ಸೇರಿ ಅಲ್ಲೇ ಚರಂಡಿ ನೀರಿಗೆ ಸೇರುತ್ತಾ ಅಲ್ಲಲ್ಲೇ ಕೊಳೆಯುತ್ತಾ ತಾಜಾಗಳಿಂದ ತ್ಯಾಜ್ಯಗಳಾಗುತ್ತಿವೆ.

ಹಬ್ಬಗಳಂತೂ ಒಂದರ ಹಿಂದೆಯೇ ಮತ್ತೊಂದು ಬರುತ್ತವೆ. ಹಳ್ಳಿಯ ಹೊಲ ತೋಟಗಳಿಂದ ಸಾಕಷ್ಟು ಹೂವು ಹಣ್ಣು, ಹಸಿರೆಲೆಗಳು ನಗರಕ್ಕೆ ಸೇರುತ್ತವೆ. ತೋಟಗಳಿಂದ ಸೇವಂತಿಗೆ, ಚೆಂಡು ಹೂ, ಜೊತೆಗೆ ಬಾಳೆಯ ಕಂಬಗಳು, ಮಾವಿನ ಎಲೆ ಸಾಲದ್ದಕ್ಕೆ ಬೂದುಗುಂಬಳಕಾಯಿ ಟನ್ನುಗಟ್ಟಲೆ ನಗರಗಳನ್ನು, ಊರುಗಳನ್ನು ಸೇರುತ್ತದೆ. ಹಬ್ಬ ಹಬ್ಬಕ್ಕೂ ನಮ್ಮ ಈ ಬಗೆಯ ಹೂಹಣ್ಣುಗಳ ವೈಭವ ಹೆಚ್ಚುತ್ತಲೇ ಸಾಗಿದೆ. ಹಬ್ಬದ ಕೊಯಿಲಿಗೆಂದೇ ರೈತರು ಸಾಕಷ್ಟು ಸಾರಜನಕ, ರಂಜಕ ಮುಂತಾದ ಗೊಬ್ಬರಗಳನ್ನು ಹಾಕಿ ಬೆಳೆದಿರುತ್ತಾರೆ. ಎಲ್ಲವೂ ನಗರಗಳ ಆಸುಪಾಸಿನ ಜಮೀನಿಂದ, ಅಲ್ಲಿನ ಮಣ್ಣಿನ ಸಾರದಿಂದಲೇ ಸೃಷ್ಟಿಯಾಗಿ ಹಬ್ಬದ ರಂಗನ್ನು ಬಣ್ಣಬಣ್ಣದ ಹೂ ಹಣ್ಣುಗಳಲ್ಲಿ ತುಂಬಿಕೊಂಡು ಮೆರುಗನ್ನು ಹೆಚ್ಚಿಸುತ್ತದೆ. ಇಂತಹ ಆಚರಣೆಗಳು ನಗರಗಳಲ್ಲಿ ಬಹು ದೊಡ್ಡ ಫ್ಯಾಷನ್‌ಗಳೆಂಬಂತೆ ಜರುಗುತ್ತವೆ. ಜತೆಗೆ ಹಬ್ಬದ ಮರುದಿನವೇ ರಸ್ತೆ ಸೇರುವ ತ್ಯಾಜ್ಯಗಳಾಗುತ್ತವೆ. ನಮ್ಮ ಹಳ್ಳಿಗಳ ಜಮೀನಿನ ಸಾರ ಕಳೆದು ಗ್ರಾಮೀಣ ಪರಿಸರಕ್ಕೆ ಬಹುದೊಡ್ಡ ನಷ್ಟವಾದರೆ, ಅದೇ ತ್ಯಾಜ್ಯವು ನಗರಗಳಲ್ಲಿ ಮಲಿನತೆಗೆ ಕಾರಣವಾಗುತ್ತದೆ. ವೈಜ್ಞಾನಿಕವಾಗಿ ಆರಂಭದಿಂದಲೂ ಅರಿತುಕೊಂಡ ಈ ರಾಸಾಯನಿಕ ಸಾಮರಸ್ಯವನ್ನು ಆಧುನಿಕ ನಾಗರಿಕ ಸಮಾಜವಂತೂ ಸಂಪೂರ್ಣ ಮರೆತು, ವರ್ತಿಸುತ್ತಿದೆ.

ಬ್ರಿಟಿಷ್ ಬರಹಗಾರ ಎಡ್ವರ್ಡ್ ಹೈಮ್ ತಮ್ಮ **"Soil and Civilization"** ಕೃತಿಯಲ್ಲಿ ಮಣ್ಣಿನೊಡನೆಯ ನಾಗರಿಕ ಸಂಬಂಧಗಳನ್ನು ವಿಮರ್ಶಿಸುತ್ತಾ ಕೆಲವೊಂದು ಹೊಳಹುಗಳನ್ನು ನೀಡಿದ್ದಾರೆ. ಅದರಲ್ಲೂ ಭಾರತೀಯ ಸಂದರ್ಭದಲ್ಲಿ ಬುದ್ಧನ ಕಾಲದಿಂದಲೂ ನೆಲದ ಗ್ರಹಿಕೆಯು ಕೇವಲ ಕಂದಾಯ ನೀತಿಯ ಆಯಾಮಗಳಲ್ಲಿ ಕಳೆದುಹೋಗುತ್ತಿರುವ ಬಗ್ಗೆ ಎಚ್ಚರಿಸುತ್ತಾರೆ. ನೆಲದ ಗ್ರಹಿಕೆಯು ಸಮುದಾಯಗಳಲ್ಲಿ ಬದಲಾಗುತ್ತಾ ದುರಂತದೆಡೆಗೆ ಸಾಗುತ್ತಿರುವ ಬಗೆಗೆ ಅನೇಕ ವಿಜ್ಞಾನಿಗಳೂ, ಸಮಾಜ ವಿಜ್ಞಾನಿಗಳೂ ಎಚ್ಚರಿಸುತ್ತಲೇ ಬಂದಿದ್ದಾರೆ. ನಾಗರಿಕ ಆಸಕ್ತಿಯ ವಿಜ್ಞಾನಿ ಮಿತ್ರರು ಚರ್ಚಿಸುವಾಗ – "ಎಲ್ಲಿದೆ ರೀ... ಡೆವಲೆಪ್‌ಮೆಂಟ್...? ಎಲ್ಲಾ ಎಸ್ಟೇಟ್ ಏಜೆನ್ಸಿ ಅಷ್ಟೇ!" ಎಂದು ಉದ್ಗರಿಸುವುದುಂಟು. ಅಪ್ಪಟ ನಗರವಾಸಿಗಳಾಗಿ ಜೀವನದ ಪ್ರಮುಖ ಭಾಗವನ್ನು ಕಳೆಯುತ್ತಿರುವ ಅನೇಕರಿಗೆ ನಗರ ಪಟ್ಟಣಗಳ ಬೆಳವಣಿಗೆಗಳನ್ನು ನೋಡಿ ಇದು ಅನುಭವಕ್ಕೆ ಬಂದಿರುತ್ತದೆ. ಎಸ್ಟೇಟ್ ಏಜೆನ್ಸಿಯ ಅಭಿವೃದ್ಧಿಯು ಇದೀಗ ಎಲ್ಲ ಕಡೆಗೂ ವ್ಯಾಪಿಸಿರುವುದು ಮತ್ತು ಅಂತಹ ಸಂದರ್ಭವು ವಿಜ್ಞಾನದಲ್ಲೂ ಚರ್ಚೆಯ ವಸ್ತುವಾಗುತ್ತಿದೆ. ವಾಸ್ತವವಾಗಿ ಇದೊಂದು ನೆಲದ ಆಸೆ! ಅದಕ್ಕೆ ಕೊಟ್ಟಿರುವ, ಕೊಡುತ್ತಿರುವ ಹೆಸರುಗಳು ಹೊಸ ಬಗೆಯವು ಅಷ್ಟೇ! ಸ್ಮಾರ್ಟ್ ಸಿಟಿ, ಮಾಡರ್ನ್ ಟೌನ್, ಕ್ಲೀನ್ ವಿಲೇಜ್ – ಎಲ್ಲದರಲ್ಲೂ ಇರುವ ಒಂದೇ ಬಹು ದೊಡ್ಡ ಆಸೆ, ಆಯಾ ನೆಲದ ಮೇಲಿನ ಮೋಹ ಮಾತ್ರ! ಇದು ಊರುಗಳನ್ನು ಮೀರಿ, ಊರಾಚೆಯ ಗುಡ್ಡ–ಬೆಟ್ಟಗಳ ಮೇಲೇರಿ ಇರಬಾರದ ಜಾಗದಲ್ಲಿ ಇರಲೇಬೇಕೆಂಬ ದುರಾಸೆಯನ್ನು ಹಚ್ಚಿದೆ.

ನಮ್ಮನ್ನು ಎರಡು ಶತಮಾನಕ್ಕೂ ಹೆಚ್ಚು ಸಮಯ ಆಳಿದ ಬ್ರಿಟಿಷರು ಕೂಡ ಇಲ್ಲಿನ ನೆಲದ ಆಸೆಯಿಂದಲೇ ಬಂದವರು. ಅದಕ್ಕೂ ಬಹಳ ಮುಂಚೆಯೇ ಕೊಲಂಬಸ್ ಭಾರತದ ನೆಲ ತಲುಪುವ ದಾರಿ ಹುಡುಕುತ್ತಾ ಅಲ್ಲಿಯವರೆಗೂ ಹಳೆಯ ಪ್ರಪಂಚಕ್ಕೆ ಗೊತ್ತಿರದೇ ಇದ್ದ ಅಮೆರಿಕ ತಲುಪಿದ್ದ. ಆತ ನಡೆಸಿದ ಸುಮಾರು ನಾಲ್ಕು ನೌಕಾಯಾನಗಳಲ್ಲಿ ಮೊದಲ ಮೂರನ್ನು ರಾಜನಂತೆ ಮಾಡಿದ್ದರೂ, ನಾಲ್ಕನೆಯದನ್ನು ಕೈದಿಯಾಗಿ ಮಾಡಬೇಕಾಯಿತು. ಕಾಲಿಗೆ ಸರಪಳಿ ಹಾಕಿ ಸ್ಪೇನಿನ ರಾಣಿ ಇಸೆಬೆಲ್ಲಳು ಕಳಿಸಿದ್ದಳು. ನಾಲ್ಕನೆಯ ಯಾನದಲ್ಲಂತೂ ರಾಜಪ್ರಭುತ್ವಕ್ಕೆ ಬೇಕಾದ್ದನ್ನು ಕೊಳ್ಳೆ ಹೊಡೆಯುವ ಉದ್ದೇಶವನ್ನೇ ಕೊಲಂಬಸ್ಸನಿಗೆ ತಾಕೀತು ಮಾಡಿದ್ದಳು!

ನೆಲದ ಆಸೆಯು ಸ್ಥಳೀಯತೆಯನ್ನೇ ನುಂಗಿ ಹಾಕಿ ವಸಾಹತೀಕರಣದ ಮಜಲನ್ನು ಸೇರಿಸುತ್ತಲೇ ಬದಲಾವಣೆಗಳನ್ನು ಹೇರುತ್ತಿರುವುದು ಸಾಮಾನ್ಯವಾಗಿದೆ. ವಸಾಹತು ಕಾಲದಲ್ಲಿ ಬ್ರಿಟಿಷರು, ಸ್ಪ್ಯಾನಿಷ್‌ರು, ಫ್ರೆಂಚರು ಸಾಕಷ್ಟೇ ವಿಸ್ತರಿಸಿ ನೆಲವನ್ನು ತಮ್ಮದಾಗಿಸಿ ಮೆರೆದರು. ಇದೀಗ ವಸಾಹತೋತ್ತರ ಸಂದರ್ಭದಲ್ಲಿ ಹೊಸ ಅಭಿವೃದ್ಧಿ ಆಯಾಮವಾಗಿ ಅಕ್ರಮ–ಸಕ್ರಮ, ಭೂ ನೀಡಿಕೆ, ಎಸ್.ಇ.ಜಡ್, ಕೈಗಾರಿಕಾ ಎಸ್ಟೇಟ್‌ಗಳು ಮುಂತಾದ ಹೆಸರಲ್ಲಿ ವಿಜೃಂಭಿಸುತ್ತಿವೆ. ಇವುಗಳಾವುವೂ ನೆಲದ ಆತ್ಯಂತಿಕ ನೈಸರ್ಗಿಕ ಕಾರ್ಯಗಳನ್ನು ಬೆಂಬಲಿಸಿ ತೆಗೆದುಕೊಂಡ ನಿರ್ಧಾರಗಳಲ್ಲ! ಕೇವಲ ಯಜಮಾನಿಕೆಯ ದರ್ಪದಲ್ಲಿ ಘೋಷಣೆಗೊಂಡ ರಾಜಕೀಯ ಫಲಿತಗಳು. ಇವುಗಳಿಗೆ ಆಧುನಿಕತೆಯ, ನಾಗರಿಕ ಹಿತವೆಂದು ಬಿಂಬಿಸಿದ ವಿವರಗಳೇ ಮುಖ್ಯ.

ಸುಮಾರು 1700ಕ್ಕೂ ಮುಂಚಿನ ದಿನಗಳಿಂದಲೂ ಐರೋಪ್ಯರು ಜಗತ್ತಿನ ಇತರೆ ದೇಶಗಳಲ್ಲಿ ಕಾಡಿನ ನೆಲವನ್ನು ಕೃಷಿಗೆಂದು ಬಯಲುಗೊಳಿಸತೊಡಗಿದರು. ತಮ್ಮ ವಸಾಹತುಗಳು ಇರುವ ಎಲ್ಲಾ ಸ್ಥಳಗಳಲ್ಲೂ ಇದೇ ಮಾದರಿಯ ಅಭಿವೃದ್ಧಿಯನ್ನು ದೃಢೀಕರಿಸುತ್ತಾ ಜನರಲ್ಲಿ ನೆಲದ ಮೇಲಿನ ಗ್ರಹಿಕೆಯನ್ನೇ ಬದಲಿಸಿದರು. ಇಲ್ಲದಿದ್ದರೆ ಈಗಲೂ ಅರಣ್ಯವಾಸಿಗಳಲ್ಲಿ ಕಾಣದ ಕಾಡು ಕಡಿದು ನೆಲ ಅಗೆಯುವ ಮಾತಿರಲಿ, ಅಚ್ಚುಕಟ್ಟಾದ ಕೃಷಿ ನೆಲವನ್ನೇ ಅಪಾರ್ಟ್‌ಮೆಂಟ್‌ಗಳಾಗಿ, ಕೆರೆಗಳನ್ನು ಮೈದಾನ, ಬಸ್ಸು ನಿಲ್ದಾಣ ಮುಂತಾದ ಸ್ಥಳಗಳಾಗಿ ಬದಲಿಸುತ್ತಿರಲಿಲ್ಲ. ಹಲವಾರು ವರ್ಷಗಳ ಹಿಂದೆಯಷ್ಟೇ ನಮ್ಮ ಕಾವೇರಿ, ಗೋದಾವರಿ, ಗಂಗಾ, ಯಮುನೆಯರ ತೀರದಲ್ಲಿ ಇಂದಿನ ವಾತಾವರಣ ಕಾಣುತ್ತಿರಲಿಲ್ಲ. ಇಂದು ಹಲವಾರು ಬಗೆಗಳಲ್ಲಿ ನಮ್ಮ ನದಿಗಳ ಮೂಲಕ



ವಿ.ವಿ. ಡೊಕುಚೇವ್

